ಅ) ಕಾರ್ಖಾನೆಯ ಸ್ಥಾಪಿತ ಸಾಮರ್ಥ್ಯವನ್ನು ಪರಿಗಣಿಸಿ, ಪೂರೈಸುವ ಮರದ ಪ್ರಮಾಣವನ್ನು ನಿಗದಿ ಮಾಡಲಾಗುವುದು. ಆದರೆ ವಾಸ್ತವಿಕವಾಗಿ ಕಾರ್ಖಾನೆಗೆ ಮೀಸಲಿಟ್ಟ ಪ್ರದೇಶದಲ್ಲಿ ಲಭ್ಯವಿರುವ ಮರದ ಆಧಾರದ ಮೇಲೆ ಮರವನ್ನು ಪೂರೈಸಲಾಗುತ್ತಿದೆ.

ಇ) ಮೆ. ಇಂಡಿಯನ್ ಪ್ಲೈವುಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಯವರ ವಿವಿಧ ಕಾರ್ಖಾನೆಗಳ ಸ್ಥಾಪಿತ ಸಾಮರ್ಥ್ಯ ಮತ್ತು ಉತ್ಪಾದಿತ ಸಾಮರ್ಥ್ಯ ಈ ಕೆಳಗಿನಂತಿವೆ.

ಕಾರ್ಖಾನೆ	ಸ್ಥಾಪಿತ ಸಾಮರ್ಥ್ಯ	ಉತ್ಪಾದನಾ ಸಾಮರ್ಥ್ಯ
	ಘ. ಮೀ. ನಲ್ಲಿ	ದಶಲಕ್ಷ ಚದುರ ಮೀಟರಿನಲ್ಲಿ
೧) ದಾಂಡೇಲಿ	೨೧,೨೫೦ (ಮರ)	೦.೬ (ಪ್ಲೈವುಡ್)
	೪೨,೦೦೦ (ಸೌದೆ)	೦.೬ (ಚಿಪ್ ಬೋರ್ಡ್)
೨) ತಾಳಗುಪ್ಪ	೧೪,೦೦೦ (ಮರ)	೧.೬ (ಪ್ಲೈವುಡ್)
೩) ಸುಬ್ರಮಣ್ಯ	೧೩,೦೦೦ (ಮರ)	೧.೬ (ಪ್ಲೈವುಡ್)
೪) ಹಂಗಾರಕಟ್ಟ	೧೦,೦೦೦ (ಮರ)	೧.೦ (ಪ್ಲೈವುಡ್)
೫) ಧಾರವಾಡ	೨೫,೦೦೦ (ಮರ)	೨.೫ (ಪ್ಲೈವುಡ್)

ಈ) ಇಲ್ಲ.

ಉತ್ತರ ಕನ್ನಡ ಜಿಲ್ಲೆಯ ಸಾಗುವಳಿ ಹಾಗೂ ಮನೆ ನಿವೇಶನದ ಬಗ್ಗೆ.

*೬೫೮. ಶ್ರೀ ಆರ್. ಎನ್. (ಭಟ್ಕಳ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಸಾಗುವಳಿ ಹಾಗೂ ಮನೆ ನಿವೇಶನದ ಬಗ್ಗೆ ಎಷ್ಟು ಜನರು ಎಷ್ಟು ಎಕರೆ ಕ್ಷೇತ್ರ ಅರಣ್ಯ ಭೂಮಿ ಅತಿಕ್ರಮಿಸಿದ್ದಾರೆ?

ಆ) ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು?

ಇ) ಅತಿಕ್ರಮಣ ಸಾಗುವಳಿಯನ್ನು ವಂಜೂರು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು? ಅತಿಕ್ರಮಣವನ್ನೆಲ್ಲಾ ಯಾವಾಗ ಸಕ್ರಮಗೊಳಿಸಲಾಗುವುದು?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ತಾಲ್ಲೂಕು	ಸಾಗುವಳಿ ಬಗ್ಗೆ ಹೆಕ್ಟೇರುಗಳಲ್ಲಿ	ಮನೆ ನಿವೇಶನದ ಬಗ್ಗೆ.
ಸಿರ್ಸಿ	೯೧೨.೨೮	೧೧೬.೩೬
ಸಿದ್ದಾಪುರ	೪೦೨.೫೭	೬೧.೨೭
ಹಳಿಯಾಳ	೧೪೯.೬೦	೧.೧೩
ಸೂಪ	೧೯೮.೬೪	೧೭.೬೫
ಕಾರವಾರ	೪೪.೧೩	೨೧.೪೬
ಅಂಕೋಲ	೨೭೧.೨೮	೫೫.೫೬
ಯಲ್ಲಾಪುರ	೧೩೭೪.೭೯	೨೪.೦೫
ಭಟ್ಕಳ	೭.೭೦	೭೪.೦೦
ಹೊನ್ನಾವರ	೨೦೬.೧೭	೫೬.೦೭
ಕುಮಟಾ	೧೧೮.೯೩	೪.೨೦
ಮುಂಡಗೋಡ್	೧೦೬೩.೬೩	—
ಒಟ್ಟು	೪೭೪.೭೨ ಹೆ.	೪೩೧.೭೫ ಹೆ.

೩) ೨೭-೪-೧೯೭೪ರ ಮೊದಲು ಮಾಡಿದ ಎಲ್ಲಾ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದರೆ ೧೯೮೦ರ ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಭಾರತ ಸರ್ಕಾರದ ಪೂರ್ವಾನುಮತಿಯು ಅಗತ್ಯವಿದೆ. ಈ ವಿಷಯವನ್ನು ಭಾರತ ಸರ್ಕಾರದೆವರೊಡನೆ ವ್ಯವಹರಿಸ ಲಾಗಿದ್ದು, ಅವರಿಂದ ಸೂಕ್ತ ಸೂಚನೆಗಳು ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಉತ್ಪನ್ನದ ವಾರ್ಷಿಕ ಆದಾಯದ ಬಗ್ಗೆ

೬೬೧. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).— ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಂ ಅರಣ್ಯ ಉತ್ಪನ್ನದಿಂದ ಸರ್ಕಾರದವರಿಗೆ ಬರುವ ವಾರ್ಷಿಕ ಆದಾಯವೆಷ್ಟು ?

ಆ) ಈ ಆದಾಯದ ಎಷ್ಟು ಪ್ರಮಾಣವನ್ನು ಜಿಲ್ಲೆಯ ಅಭಿವೃದ್ದಿಗೆ ಉಪಯೋಗಿಸಲಾಗು ತ್ತಿದೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಿಂದ ಅರಣ್ಯ ಉತ್ಪನ್ನದಿಂದ ಸರ್ಕಾರಕ್ಕೆ ವರ್ಷಕ್ಕೆ ಸರಾಸರಿ ೨೩ ಕೋಟಿ ರೂಪಾಯಿ ಆದಾಯವಿದೆ.

ಆ) ಉತ್ತರ ಕನ್ನಡ ಜಿಲ್ಲೆಯ ಅರಣ್ಯಾಭಿವೃದ್ದಿ ಕಾರ್ಯಗಳಿಗೆ ಆದಾಯದ ಸುಮಾರು ಶೇಕಡ ೫.೮ ರಷ್ಟನ್ನು ವಿನಿಯೋಗಿಸಲಾಗುತ್ತಿದೆ.